ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ, ಮುಜರಾಯಿ, ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ದಿವಸವೇ ಜಿಲ್ಲಾಧಿಕಾರಿಗಳ ಜೊತೆಗೆ ಮಾತನಾಡಿ ತಾರತಮ್ಯದ ವಿಚಾರವನ್ನು ಪ್ರಸ್ತಾಪ ಮಾಡುತ್ತೇವೆ, ಆದರೆ ನಮ್ಮ ನೀತಿಯ ಪ್ರಕಾರ ಅಲ್ಲಿ 28 ಕೆ.ಜಿ. ಅವಶ್ಯಕತೆ ಇದೆ ಎಂದು ಹೇಳಿ ಅಲ್ಲಿಯ ಬೇಡಿಕೆಗಳಿಗನುಗುಣವಾಗಿ ಶೇಕಡ 50 ರಷ್ಟು ಕೊಡತಕ್ಕಂಥದ್ದನ್ನು ಇಲ್ಲಿಯವರೆವಿಗೂ ಪರಿಪಾಲಿಸಿಕೊಂಡು ಬಂದಿರುವಂಥದ್ದು ಒಂದು ಪದ್ಧತಿ. ಅದರಲ್ಲಿ 28 ಕೆ.ಜಿ.ಯ ಗರಿಷ್ಟ ಮಿತಿ ಬೇಕು ಎಂದು ಕೇಳುವುದಾದರೆ, ಅಷ್ಟು ಕೂಡ ಕೊಡುತ್ತಾರೆ ಅಥವಾ ಅಲ್ಲಿ ಅಷ್ಟು ಕೂಡ ಬೇಡಿಕೆ–ಯಿಲ್ಲ ಎನ್ನುವ ಸಂದರ್ಭ ಬಂದಾಗ ಶೇಕಡ 50 ರಷ್ಟು ಕೊಡುತ್ತಾರೆ. ಅದು ಈ ತರಹದಲ್ಲಿ ಏನಾದರೂ ತೊಂದರೆಯಾಗಿದೆಯೋ ಗೊತ್ತಿಲ್ಲ. ಆ ರೀತಿ ಏನಾದರೂ ಭಿನ್ನಾಭಿಪ್ರಾಯ, ತಾರತಮ್ಯ, ಎನ್ನತಕ್ಕಂಥದ್ದು ಇದ್ದರೆ ಅದಕ್ಕೆ ಕಾರಣ ಏನೆಂಬುದನ್ನು ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಂಡು ಮಾನ್ಯ ಶಾಸಕರಿಗೆ ವಿಚಾರವನ್ನು ತಿಳಿಸುತ್ತೇನೆ.

ಶ್ರೀ ಶಿವರಾಜ್ ಸಜ್ಜನ್ : ಸುಮಾರು ತಿಂಗಳಿಗಳಿಂದ ಸಕ್ಕರೆಯನ್ನು ವಿತರಣೆ ಮಾಡುತ್ತಿಲ್ಲ, ಸುಮಾರು 6–7 ತಿಂಗಳುಗಳಿಂದ ಸಕ್ಕರೆಯನ್ನು ಕೊಡುತ್ತಿಲ್ಲ, ಮತ್ತು ಅಲ್ಲಿ ತಾರತಮ್ಯ ಏಕೆ ಮಾಡುತ್ತಿದ್ದಾರೆಂದರೆ, ಬೇಡಿಕೆ ಇರುವುದೇ ಗ್ರಾಮೀಣ ಪ್ರದೇಶದಲ್ಲಿ. ಅಕ್ಕಿ ಮತ್ತು ಗೋಧಿಗೆ ಹೆಚ್ಚಿನ ಬೇಡಿಕೆ ಇರುವುದೇ ಗ್ರಾಮೀಣ ಪ್ರದೇಶದಲ್ಲಿ. ಆದುದರಿಂದ, ನಗರ ಪ್ರದೇಶಕ್ಕೆ 28 ಕೆ.ಜಿ. ಕೊಡುತ್ತಿದ್ದಾರೆ, ಗ್ರಾಮೀಣ ಪ್ರದೇಶಕ್ಕೆ ಕೇವಲ 21 ಕೆ.ಜಿ. ಅಕ್ಕಿ ಹಾಗೂ ಗೋಧಿಯನ್ನು 2 ಕೆ.ಜಿ. 400 ಗ್ರಾಂ ಕೊಡುತ್ತಿದ್ದಾರೆ.

ವಿಷಯ (ಟ) : ಬಿತ್ತನೆ ಬೀಜಗಳಿಗೆ ಸಬ್ಸಿಡಿ ನೀಡುವ ಬಗ್ಗೆ

ಶ್ರೀ ಹೆಚ್. ನಿಂಗಪ್ಪ (ಕುಣಿಕಲ್) : ಮಾನ್ಯ ಅಧ್ಯಕ್ಷರೆ, ಇವತ್ತು ಬಿತ್ತನೆ ಬೀಜಗಳನ್ನು ರೈತ ಸಂಪರ್ಕ ಕೇಂದ್ರಗಳ ಮೂಲಕ ಮಾರಾಟ ಮಾಡುತ್ತಿದ್ದರು. ಅದಕ್ಕೆ ಮೊದಲು ಸಬ್ಸಿಡಿಯನ್ನು ಕೊಡುತ್ತಿದ್ದರು; ಆದರೆ 24ನೇ ತಾರೀಖಿನಿಂದ ಸಬ್ಸಿಡಿ ಕೊಡತಕ್ಕಂಥದ್ದನ್ನು ನಿಲ್ಲಿಸಿದ್ದಾರೆ. ಇದರಿಂದ ರೈತರಿಗೆ ಬಹಳ ಅನಾನುಕೂಲವಾಗಿ ಬೀಜಗಳನ್ನು, ಬಿತ್ತನೆ ಬೀಜಗಳನ್ನು ಕೊಳ್ಳತಕ್ಕಂಥ ಪರಿಸ್ಥಿತಿಯಲ್ಲಿ ಇವತ್ತು ರೈತರು ಇಲ್ಲ. ಅದಕ್ಕೆ ಈಗ ತಾನೇ ಕುಣಿಕಲ್‌ನಿಂದ ಬಂದಂಥ ಸುದ್ದಿಯ ಪ್ರಕಾರ ರೈತರು ಒಂದು ಪ್ರತಿಭಟನೆ ಮಾಡತಕ್ಕಂಥ ಒಂದು ಕೆಲಸವನ್ನು ಮಾಡುತ್ತಿದ್ದಾರೆ. ಆದುದರಿಂದ, ದಯಮಾಡಿ ಸರ್ಕಾರದವರು ಈ ಬಗ್ಗೆ ಶೀಘ್ರವಾಗಿ ಗಮನ ಹರಿಸಿ, ರೈತ ಸಂಪರ್ಕ ಕೇಂದ್ರಗಳ ಮೂಲಕ ಏನು ಇವತ್ತು ಬಿತ್ತನೆ ಬೀಜಗಳನ್ನು ಮಾರಾಟ ಮಾಡುತ್ತಿದ್ದರೋ ಅದಕ್ಕೆ ಸಬ್ಸಿಡಿಯನ್ನು ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ಮುಂದು ವರಿಸಬೇಕೆಂದು ನಾನು ಇವತ್ತು ಕೇಳಿಕೊಳ್ಳುತ್ತೇನೆ.

12.30 ಪಿ.ಎಂ

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ, ಮುಜರಾಯಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಹಿಂದಿನ ಸರ್ಕಾರ ಬಿತ್ತನೆ ಬೀಜಗಳಿಗೆ ರಿಯಾಯ್ತಿ ಕೊಡಬೇಕೆಂದು 50 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಸಣ್ಣ ಮತ್ತು ಅತೀ ರೈತರಿಗೆ ಕೊಡಬೇಕಾಗಿರತಕ್ಕಂಥ ಸೌಲಭ್ಯ ಇದಾಗಿದೆ. ಅದರೆ, ಅನೇಕ ಕಡೆ ಇದರ ದುರುಪಯೋಗವಾಗಿರತಕ್ಕಂಥದ್ದು, ಅಂದರೆ, ಇದರ ಲಾಭವನ್ನು ದೊಡ್ಡ ರೈತರು ಪಡೆದುಕೊಂಡಿದ್ದಾರೆ ಎನ್ನತಕ್ಕಂಥ ದೂರುಗಳೂ ಸಹ ಬಂದಿವೆ. ಮತ್ತೆ ಈಗಾಗಲೇ ಕೊಟ್ಟಿರತಕ್ಕಂಥ 50 ಕೋಟಿ ರೂಪಾಯಿ ಸಾಕಾಗುವುದಿಲ್ಲ ಎನ್ನತಕ್ಕಂಥ ವಿಚಾರ ಕೂಡ ಸರ್ಕಾರದ ಗಮನಕ್ಕೆ ಬಂದಿದೆ. ಹಣಕಾಸಿನ ಸಚಿವರು ಆಗಿರತಕ್ಕಂಥ ಮಾನ್ಯ ಉಪ ಮುಖ್ಯಮಂತ್ರಿಯವರ ಜೊತೆ ಮಾತನಾಡಿ ತಾವು ಹೇಳಿದಂತೆ ಈ ಹಂಗಾಮಿನಲ್ಲಿಯೇ ಬೀಜವನ್ನು ಒದಗಿಸಿ ಕೊಡತಕ್ಕಂಥ ಜವಾಬ್ದಾರಿ ನಮ್ಮ ಮೇಲಿರುವುದರಿಂದ

ಹೆಚ್ಚಿನ ಹಣವನ್ನು ಬಿಡುಗಡೆ ಮಾಡುವುದಕ್ಕೆ ಪ್ರಯತ್ನ ಮಾಡಿ ಈ ವಿಷಯವನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ವಿಷಯ (ಠ) : ಶ್ರೀನಿವಾಸಪುರ ವಿಧಾನ ಸಭಾ ಕ್ಷೇತ್ರದಲ್ಲಿ ಅಧಿಕೃತ ಮತದಾರರ ಪಟ್ಟಿಯನ್ನು ವಿಕೃತಗೊಳಿಸಿರುವ ಅಧಿಕಾರಿ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ

†ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೆ, ಕಳೆದ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಳ ಪೂರ್ವದಲ್ಲಿ ಕೇಂದ್ರ ಚುನಾವಣಾ ಆಯೋಗದ ಆದೇಶದ ಮೇರೆಗೆ ಒಂದು ವೇಳಾ ಪಟ್ಟಿಯನ್ನು ಪ್ರಕಟಿಸಿ ಮತದಾನ ಪಟ್ಟಿಯ ಪರಿಷ್ಕರಣ ಕಾರ್ಯವನ್ನು ಕೈಗೊಳ್ಳಲಾಗಿತ್ತು. ನನ್ನ ಮತಕ್ಷೇತ್ರದಲ್ಲಿಯೂ ಕೂಡ ಮತದಾರರ ಆಕ್ಷೇಪಣೆಗಳನ್ನು ಕೇಳಿದ ಮೇಲೆ ಮತ್ತು ಇದರ ವಿಚಾರಣೆ ಪೂರ್ಣಗೊಂಡನಂತರ ಆಖ್ಯೆರು ಮತದಾರರ ಪಟ್ಟಿಯನ್ನು ಪ್ರಕಟಣೆ ಮಾಡಿದ ಮೇಲೆ ಇದೇ ನಿಜವಾದಂಥ ಮತದಾರರ ಪಟ್ಟಿಯೆಂದು ನಂಬಿ ಅದನ್ನು ನಾವು ಆಶ್ರಯಿಸಿದ್ದವು. ಆದರೆ, ಮತದಾನದ ದಿವಸ ನಮ್ಮ ಅರಿವಿಗೆ ಬಂದಿದೇನೆಂದರೆ, ಜಿಲ್ಲಾಧಿಕಾರಿಯವರ ಗಮನಕ್ಕೆ ಹೋಗಿ ಅಧಿಕೃತವಾಗಿ ಆಖ್ಯೆರುವಾದಂಥ ಮತದಾರರ ಪಟ್ಟಿ ಪ್ರಕಟಣೆಗೆಂದು ಪ್ರೆಸ್‌ಗೆ ಪ್ರಿಂಟ್‌ಗೆ ಹೋಗುವಂಥ ವೇಳೆಯಲ್ಲಿ ಆಯ್ದ ಕೆಲವು ಗ್ರಾಮಗಳಲ್ಲಿ ಕೆಲವು ಮತದಾರರ ಹೆಸರು ಸೇರ್ಪಡೆಯಾಗಿರುವುದರಿಂದ ಮತ್ತು ತೆಗೆದು ಹಾಕಿರುವುದರಿಂದ ಹೆಚ್ಚು ಕಡಿಮೆ ಸುಮಾರು 10 ಸಾವಿರ ಮತದಾರರ ಹೆಸರು ಪಟ್ಟಿಯಿಂದ ಬಿಡಲಾಗಿದೆ. ಈ ರೀತಿಯಾದ ಅನ್ಯಾಯ ಮಾಡುವುದಕ್ಕೆ ಸಆಧ್ಯತೆ ಇದೆಯೇ ಎಂದು ನಾನು ಎಲ್ಲಾ ದಾಖಲೆಗಳನ್ನು ತಾಲ್ಲೂಕು ಮತ್ತು ಜಿಲ್ಲಾ ಕಛೇರಿಯಲ್ಲಿ ವಿಚಾರಣೆ ಮಾಡಿ ನೋಡಿದೆ. ಜಿಲ್ಲಾಧಿಕಾರಿಯವರ ಗಮನಕ್ಕೂ ಕೂಡ ತರದೆ ಸಹಾಯ ಚುನಾವಣಾ ಅಧಿಕಾರಿಯಾಗಿರತಕ್ಕಂಥ ಒಬ್ಬ ತಹಸೀಲ್ದಾರ್‌ರವರು ಅಧಿಕೃತ ಪಟ್ಟಿಯನ್ನು ಪೂರ್ಣವಾಗಿ ವಿಕೃತಗೊಳಿಸಿ ಆತನ ಮನಸೋ ಇಚ್ಛೆ ಮತದಾರರ ಪಟ್ಟಿಯನ್ನು ತಯಾರು ಮಾಡಿರತಕ್ಕಂಥ ಸ್ಥಿತಿಗೆ ನಾವು ತಲುಪಿದ್ದೇವೆ. ಪ್ರಜಾಪ್ರಭುತ್ವದಲ್ಲಿ ಜನರ ಆಯ್ಕೆಗೆ ಬಿಡತಕ್ಕಂಥದ್ದು ಮತ್ತು ಅವರ ನಿರ್ಣಯಕ್ಕೆ ತಲೆ ಭಾಗತಕ್ಕಂಥದ್ದು ಬಏರೆ. ಆದರೆ, ಇಂಥವರು ಅರ್ಧ ಡಜನ್ ಒಂಡೊಂದು ಕ್ಷೇತ್ರದಲ್ಲಿದ್ದರೆ ಏನು ಆಗಬಹುದು ಎಂಬುದನ್ನು ತಾವೇ ಯೋಚನೆ ಮಾಡಬಹುದು ಈತ ಇದುವರೆಗೂ ಸರ್ಕಾರಿ ಸೇವೆಯಲ್ಲಿ ಮುಂದುವರಿಯುತ್ತಿದ್ದಾನೆ. ಈ ಹಂತದಲ್ಲಿ ಈ ರೀತಿಯಾದ ಕೃತ್ಯವನ್ನು ಮಾಡಲು ಧೈರ್ಯ ಮಾಡಿರತಕ್ಕಂಥ ಅಧಿಕಾರಿ ಸರ್ಕಾರಿ ಸೇವೆಯಲ್ಲಿ ಮುಂದುವರಿಯುವುದಾದರೆ ಸರ್ಕಾರ ಪಾಡು ಏನು ಆಗಬಹುದು? ಮತ್ತೆ ಸರ್ಕಾರವನ್ನು ಆಶ್ರಯಿಸಿರುವ ಜನರ ಪಾಡು ಏನು ಆಗಬಹುದು? ನನ್ನ ಮತ ಕ್ಷೇತ್ರದಲ್ಲಿ ಈ ರೀತಿಯಾಗಿರತಕ್ಕಂಥದ್ದು ಬಹಳ ಗಂಭೀರ ಸ್ವರೂಪದ ಆರೋಪವಾಗಿದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳತಕ್ಕಂಥದ್ದು ಬೇರೆ. ಆದರೆ, ಇಲ್ಲಿಯವರೆಗೆ ಸಾಕಷ್ಟು ತಡವಾಗಿದೆ. ಈ ವಿಷಯವನ್ನು ಈಗಾಗಲೇ ಜಿಲ್ಲಾಧಿಕಾರಿಯವರ ಗಮನಕ್ಕೆ ತಂದಿದ್ದೇನೆ. ಆದರೆ, ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾನು ಮಾಡಿರತಕ್ಕಂಥ ಈ ಅಪಾದನೆ ಮೇಲ್ನೋಟಕ್ಕೆ ಸಾಬೀತು ಆಗತಕ್ಕಿಂಥ ವಿಷಯವಾಗಿದ್ದರೆ ಇದರ ಬಗ್ಗೆ ಜಿಲ್ಲಾಧಿಕಾರಿಯವರ ಜೊತೆ ಚರ್ಚೆ ಮಾಡಿ ಈ ಕೂಡಲೇ ಆ ಅಧಿಕಾರಿಯನ್ನು ಅಮಾನತ್ತು ಮಾಡಬೇಕು. ಮತ್ತೆ ಅಮಾನತ್ತು ಬಹಳ ದಿವಸ ಮುಂದುವರಿಯಬಾರದು. ಏಕೆಂದರೆ, ಇಂಥವರನ್ನು ಸರ್ಕಾರಿ ಸೇವೆಯಿಂದ ತೆಗೆಯತಕ್ಕಂಥ ಕೆಲಸ ಮಾಡಿದರೆ ಬಹುಶಃ ಮುಂದೆ ಈ ರೀತಿ ಕೆಲಸಕ್ಕೆ ಕೈ ಹಾಕಲಿಕ್ಕೆ ಸ್ವಲ್ಪ ಎಚ್ಚರಿಕೆ ಕೊಟ್ಟಂತಾಗುತ್ತದೆ. ಪ್ರಜಾಪ್ರಭುತ್ವ ಇವರ ಕೈಯಲ್ಲಿ ಊರ್ಜಿತವಾಗುವ ಸ್ಥಿತಿಗೆ ನಾವು ಬರಬಾರದೆಂದು ಅತ್ಯಂತ ಕಳಕಳಿಯಿಂದ ಸರ್ಕಾರಕ್ಕೆ ನಿವೇದನೆ ಮಾಡಿಕೊಳ್ಳುತ್ತೇನೆ.